ಕಣ್ಣುಗಳನ್ನು ತಾನು ಸೆಳೆಯುತ್ತಿದ್ದೇನೆ ಎಂಬುದು ಬೋಧೆಯಾಗುತ್ತಾ ಅಂತಃಪ್ರಜ್ಞೆಯಲ್ಲಿ ತೃಪ್ತಿಗೂ, ಸಣ್ಣಮುಜುಗರಕ್ಕೂ ಕಾರಣವಾಗುತ್ತ, ಒಂದು ಆಟೊ ನಿಲ್ಲಿಸಿ ಕೆಂಪೇಗೌಡ ನಿಲ್ದಾಣಕ್ಕೆ ಬಂದು ಎರಡುನೂರಾಹತ್ತು ನಂಬರಿನ ಬಸ್ಸಿನಲ್ಲಿ ಮಹಿಳೆಯರ ಆಸನದಲ್ಲಿ ಕುಳಿತಳು.

ಕಿಡಕಿಪಕ್ಕದ ಸೀಟು ಸುರಕ್ಷಿತವಾಗಿತ್ತು. ಮುಕ್ಕಾಲುಗಂಟೆ ಸುತ್ತಾಡಿ ಚಿಕ್ಕಲಸಂದ್ರಕ್ಕೆ ಬಸ್ಸು ಬಂತು. ಹೂವುಮಾರುವ ಮಹಿಳೆಯ ಹತ್ತಿರ ಅಬ್ಬಾಯಿನಾಯ್ಡು ಸ್ಟುಡಿಯೊ ಬಗ್ಗೆ ವಿಚಾರಿಸಿ ರಿಕ್ಷಾದಲ್ಲಿ ಕುಳಿತಳು. 'ರಿಯಾಲ್ಟಿ ಶೋ ಶೂಟಿಂಗಿಗ ಮೇಡಂ?...' ನಡೆಸುತ್ತ ಕುತೂಹಲ ತೋರಿದ ಚಾಲಕನಿಗೆ ಹೌದು ಅಂದಳು. ಅಂತೂ ಅಲ್ಲಿ ಏನೋ ನಡೆಯುತ್ತಿದೆ ಎಂಬ ಮಾಹಿತಿಯ ಖುಶಿಯಲ್ಲಿ, ಸ್ಟುಡಿಯೊದೆದುರು ಇಳಿದವಳ ಎದೆಬಡಿತ ಇಮ್ಮಡಿಯಾಗಿತ್ತು. ಸಿನಿಮಾದ್ದಾಗಿರಲಿಲ್ಲ, ಟೀವಿ ವಾಹಿನಿಯಲ್ಲಿ ದಿನಾರಾತ್ರಿ ಪ್ರಸಾರವಾಗುವ ಮಕ್ಕಳ ಸಂಗೀತಸ್ಪರ್ಧೆಯ ರಿಯಾಲಿಟಿ ಶೋದ ಚಿತ್ರೀಕರಣ ನಡೆಯುತ್ತಿತ್ತು. ಹೋಗಿ ಜನರ ನಡುವೆ ಕುಳಿತಳು. ಒಂದು ಹಾಡಾದ ಮೇಲೆ ಎಷ್ಟೋಹೊತ್ತು ಚರ್ಚೆ, ಮಧ್ಯೆ ಜಡ್ಜ್‌ಗಳು ಎದ್ದುಹೋಗಿ ಬರೋದು, ಏನೇನೋ ಸೂಚನೆಗಳು ಹೀಗೆ ಸಾಗುತ್ತಿತ್ತು. ಅಲ್ಲೇ ಮಧ್ಯಾಹ್ನ ಊಟ ಕೊಟ್ಟರು. ಆಮೇಲೆ ಚಹ, ಕಾಫಿಯೂ ಆಯ್ತು. ಆದರೆ ಸುರಭಿಯ ಕಣ್ಣು ಅನುಕ್ಷಣ ಜಡ್ಜ್‌ಗಳನ್ನು ಕಾಯುತ್ತಿತ್ತು. ಅಕ್ಕಪಕ್ಕದವರು ಹೇಳಿದ ಪ್ರಕಾರ ಇಬ್ಬರು ಪ್ರಸಿದ್ಧ ಹಿನ್ನೆಲೆ ಗಾಯಕರು, ಒಬ್ಬರು ಸಂಗಿತನಿರ್ದೇಶಕರಾಗಿದ್ದರು. ಅನೇಕಾನೇಕ ಕನ್ನಡ, ಹಿಂದಿ, ತೆಲುಗು ಸಿನಿಮಾಗಳಿಗೆ ಸಂಗೀತನಿರ್ದೇಶನ ಮಾಡಿದ ಖ್ಯಾತಿ ಅವರಿಗಿತ್ತು. ಸಿನಿಮಾಕ್ಕೆ ಸಂಬಂಧಿಸಿದವರೊಬ್ಬರು ಮೊದಲಸಾರಿ ಕಣ್ಣಳತೆಯಲ್ಲಿ ನಿಲುಕುವಂತಿದ್ದರು. ಕಾಯ್ದುಕಾಯ್ದು ಕತ್ತಲಾಗುವಾಗ ಆವತ್ತಿನ ಚಿತ್ರೀಕರಣ ಮುಗಿಯುವ ಸೂಚನೆ ಸಿಕ್ಕಿತು. ಜಡ್ಜ್‌ಗಳು ಆಮೇಲೆ ಎಲ್ಲಿರುತ್ತಾರೆ ಅಂತ ವಿಚಾರಿಸಿದವಳಿಗೆ ಅವರು ಹಿಂದಿರುವ ರೂಮಿಗೆ ಹೋಗಿ ಮನೆಗೆ ಹೊರಟುಹೋಗುತ್ತಾರೆ ಎಂಬುದು ಗೊತ್ತಾಗಿ, ದಡಬಡಿಸಿ ಎದ್ದು ಆಕಡೆ ಧಾವಿಸಿದಳು. ಹೊರಗೆ ನಿಂತ ದೊಡ್ಡಕಾರಿನತ್ತ ಅವರಾಗಲೆ ಹೋಗುವುದು ಕಂಡು ಓಡುತ್ತಹೋಗಿ ಅವರ ಕಾಲುಮುಟ್ಟಿ, ಕೈಜೋಡಿಸಿ ಅಡ್ಡಡ್ಡ ನಿಂತುಬಿಟ್ಟಳು. ಅಪರಿಚಿತ ತರುಣಿಯೊಬ್ಬಳು ಹಾಗೆಮಾಡಿದ್ದಕ್ಕೆ ಗಡಿಬಿಡಿಗೆ ಬಿದ್ದ ನಿರ್ದೇಶಕರು 'ನಿಮ್ಮ ಗುರುತು ಸಿಗಲಿಲ್ಲ... ಕ್ಷಮಿಸಿ' ಅನ್ನುತ್ತಿರುವಂತೆ ಈ ಕ್ಷಣ ಬಿಟ್ಟರೆ ಮತ್ತೆಲ್ಲಾ ಶೂನ್ಯ ಎಂಬ ದೈನಾಸಭಾವ ಧುತ್ತೆಂದು ಆವರಿಸಿ, ನಟಿಸಿ ಹೆಸರು ಮಾಡಬೇಕೆಂಬ ತನ್ನ ಆಸೆ, ತಪ್ಪಿದರೆ ಮದುವೆಯ ಕರಾಳ ಕೈಗೆ ತಾನು ಸಿಕ್ಕು ಮಣ್ಣಾಗಿಹೋಗುವ ಹತಾಶೆಯನ್ನು ಗಳಗಳನೆ ತೋಡಿಕೊಳ್ಳುತ್ತ ನೀರು ಸುರಿಯುವ ಕಣ್ಣು, ಮುಗಿದ ಕೈಯೊಂದಿಗೆ ಪ್ರತಿಮೆಯಾಗಿಬಿಟ್ಟಳು. ದಾರಿಗೆದುರು ನಿಂತ ತರುಣಿಯ ಸೌಂದರ್ಯ ಮತ್ತು ದೀನಾತಿದೀನ ಭಾವಗಳು ಒಂದನ್ನೊಂದು ಆವರಿಸಿಕೊಳ್ಳುತ್ತಿರುವ ರೀತಿಗೆ ನಿರ್ದೇಶಕರು ಪ್ರತಿಕ್ರಿಯೆ ಹೊಳೆಯದೆ ನಿಂತರು. ಕ್ಷಣದ ನಂತರ ಸಾವರಿಸಿಕೊಂಡು, 'ನೋಡಮ್ಮ ನಾನು ಸಂಗೀತನಿರ್ದೇಶಕ... ನಟನೆ ತರಬೇತಿ ಮಾಡಿಕೊಂಡಿದೀರ?' ಕೇಳಿದ್ದಕ್ಕೆ '...ನಾನು ಏನುಹೇಳಿದ್ರೂ ಮಾಡತೀನಿ... ಇಲ್ಲಾ ಅನ್ನಬೇಡಿ' ತ್ವಮೇವ ಶರಣಂ ಅನ್ನುವಂತಿದ್ದ ಮಾತು ಕರುಳು ಕರಗಿಸಿದರೂ, ತಾನು ನಟನೆಯ ವಿಷಯದಲ್ಲಿ ಸಹಾಯ ಮಾಡಲಾರೆ ಎಂಬರಿವಿಂದ 'ಸೀರಿಯಲ್ಲುಗಳಿಗೆ ಅಡಿಶನ್ಸ್ ನಡೀತಿರುತ್ತೆ, ಟೀವೀಲಿ ಅನೌನ್ಸ್ ಮಾಡತಿರತಾರೆ, ನೋಡಿ. ನಿಮ್ಮ ನಂಬರು ಕೊಟ್ಟಿರಿ...' ಅಂದರು. ಒಬ್ಬಳೇ ಇದ್ದದ್ದು ಕಂಡು ಎಲ್ಲಿ ಮನೆ? ಅಂತ ವಿಚಾರಿಸಿ, ತಮ್ಮ ದಾರಿ ಸ್ವಲ್ಪ ಬದಲಿಸಿಕೊಂಡು ಮಲ್ಲೇಶ್ವರವೃತ್ತದ ವರೆಗೆ ತಮ್ಮ ಕಾರಲ್ಲಿ ಬಿಟ್ಟುಕೊಟ್ಟರು. ಸ್ಥಿತಿ ಹಾಗೇ ಇದ್ದರು ತನ್ನ ಗುರಿಯತ್ತ ಏನೋ ಪ್ರಗತಿಯಾದಂತೆ ಭಾವನೆಯಾಗುತ್ತಿತ್ತು. ಒಂದುವಾರ ಫೋನು ಬರಬಹುದು ಅಂತ